ಶಾಲಾ ಶಿಕ್ಷಣ ಇಲಾಖೆ

ಬದಲಾವಣೆ ಶಿಕ್ಷಣ, ಭವಿಷ್ಯದ ನಿರ್ಮಾಣ 2025-26

ನನ್ನ ಹೆಮ್ಮೆಯ ಕನ್ನಡ

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ

ಕನ್ನಡವೇ ಸತ್ಯ ಕನ್ನಡವೇ ನಿತ್ಯ

## ಎಸ್.ಎಸ್.ಎಲ್.ಸಿ ೨೦೨೫-೨೬





**10ನೇ ತರಗತಿ**

**ಅರ್ಧವಾರ್ಷಿಕ ಪರೀಕ್ಷೆ 2025-26**

**ಮಾದರಿ ಉತ್ತರ ಸೂಚಿ**

## ಪ್ರಥಮ ಭಾಷೆ ಕನ್ನಡ

ಗುಡ್ಡಪ್ಪ.ಎಂ.ಎಚ್ ಸಹ ಶಿಕ್ಷಕರು
ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ
8105599103

# 10ನೇ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ 2025–26

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 12 |
| 2 | ಗ್ರಹಿಕೆ | 36 | 36 | 21 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 07 | 07 | 07 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 20 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 33 | 33 | 11 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 20 | 20 | 05 |
| 6 | ದೀರ್ಘ ಉತ್ತರ – 3 (ಐದು ಅಂಕಗಳ ಪ್ರಶ್ನೆಗಳು) | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 40 | 40 | 24 |
| 2 | ಸಾಧಾರಣ | 50 | 50 | 18 |
| 3 | ಕಠಿಣ | 10 | 10 | 03 |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ನಮ್ಮ ಭಾಷೆ | 08 | 03 |
| 2 | ವ್ಯಾಘ್ರಗೀತೆ | 06 | 03 |
| 3 | ಭಾಗ್ಯಶಿಲ್ಪಿಗಳು | 08 | 04 |
| 4 | ಎದೆಗೆ ಬಿದ್ದ ಅಕ್ಷರ | 06 | 03 |
| | ಗದ್ಯ ಒಟ್ಟು | 28 | 13 |

### 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಸಂಕಲ್ಪಗೀತೆ | 08 | 03 |
| 2 | ಹಕ್ಕಿ ಹಾರುತಿದೆ ನೋಡಿದಿರಾ? | 07 | 02 |
| 3 | ಕೌರವೇಂದ್ರನ ಕೊಂದೆ ನೀನು | 07 | 03 |
| 4 | ಛಲಮನೆ ಮೆಱೆವೆಂ | 08 | 03 |
| | ಪದ್ಯ ಒಟ್ಟು | 30 | 11 |

### 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವಸಂತಮುಖ ತೋರಲಿಲ್ಲ | 03 | 02 |
| 2 | ಭಗತ್‌ಸಿಂಗ್ | 02 | 01 |
| 3 | ಉದಾತ್ತ ಚಿಂತನೆಗಳು | 04 | 02 |
| | ಪದ್ಯ ಒಟ್ಟು | 09 | 05 |

### 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 04 | 01 |

### 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

## ಹಂತ : 5(ಎ) 10ನೆಯ ತರಗತಿ – ಅರ್ಧವಾರ್ಷಿಕ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ನಮ್ಮ ಭಾಷೆ | ** | 1(1) | ** | ** | ** | ** | 2(2) | ** | ** | ** | 1(3) | ** | ** | ** | ** | 1(1) | 2(2) | 1(3) | ** | ** | 08 | 04 |
| 2 | ವ್ಯಾಘ್ರಗೀತೆ | ** | 1(1) | 1(3) | | ** | ** | 1(2) | ** | ** | ** | ** | ** | ** | ** | ** | 1(1) | 1(2) | 1(3) | ** | ** | 06 | 03 |
| 3 | ಭಾಗ್ಯಶಿಲ್ಪಿಗಳು | ** | 1(1) | ** | ** | ** | ** | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| 4 | ಎದೆಗೆ ಬಿದ್ದ ಅಕ್ಷರ | ** | ** | ** | ** | ** | 1(1) | ** | ** | ** | ** | 1(3) | 1(4) | ** | ** | ** | 1(1) | ** | 1(3) | 1(4) | ** | 08 | 03 |
| | **ಗದ್ಯ ಒಟ್ಟು** | ** | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಸಂಕಲ್ಪಗೀತೆ | ** | ** | ** | ** | ** | ** | 2(2) | ** | ** | ** | 1(3) | ** | ** | | ** | ** | 2(2) | 1(3) | ** | ** | 07 | 03 |
| 2 | ಹಕ್ಕಿ ಹಾರುತಿದೆ ನೋಡಿದಿರಾ? | ** | 1(1) | 1(3) | ** | ** | ** | ** | ** | ** | ** | ** | ** | ** | 1(4) | ** | 1(1) | ** | 1(3) | 1(4) | ** | 08 | 03 |
| 3 | ಕೌರವೇಂದ್ರನ ಕೊಂದೆ ನೀನು | ** | ** | ** | ** | ** | ** | ** | ** | ** | ** | 1(3) | 1(4) | ** | ** | ** | ** | ** | 1(3) | 1(4) | ** | 07 | 02 |
| 4 | ಛಲಮನೆ ಮೆರೆವೆಂ | ** | ** | ** | 1(4) | ** | 1(1) | ** | ** | ** | ** | 1(3) | ** | ** | ** | ** | 1(1) | ** | 1(3) | 1(4) | ** | 08 | 03 |
| | **ಪದ್ಯ ಒಟ್ಟು** | ** | **1(1)** | **1(3)** | **1(4)** | ** | **1(1)** | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ವಸಂತ ಮುಖ ತೋರಲಿಲ್ಲ | ** | **1(1)** | ** | ** | ** | ** | 1(2) | ** | ** | ** | ** | ** | ** | ** | ** | **1(1)** | 1(2) | ** | ** | ** | 03 | 02 |
| 2 | ಭಗತ್‌ಸಿಂಗ್ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ಉದಾತ್ತ ಚಿಂತನೆಗಳು | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |

## ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ, ವಾಕ್ಯರಚನೆಗಳು

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | 6(1)) | ** | ** | ** | 4(1) | ** | ** | ** | ** | ** | ** | ** | ** | ** | 10(1) | ** | ** | ** | ** | ** | 10 | 10 |
| | **ಒಟ್ಟು** | **6(1)** | ** | ** | ** | **4(1)** | ** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **6(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **14– 21** | | | | **19– 36** | | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಎಸ್.ಎಸ್.ಎಲ್.ಸಿ ಅರ್ಧವಾರ್ಷಿಕ ಪರೀಕ್ಷೆ ಸೆಪ್ಟಂಬರ್–2025

**S.S.L.C MIDTERM EXAMINATION JANUARY 2025**

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

**ದಿನಾಂಕ : 12.09.2025** **ವಿಷಯ ಸಂಕೇತ : 01K**

**ಸಮಯ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

**CCE-RF**
**Revised**
**ಶಾಲಾ ಅಭ್ಯರ್ಥಿಗಳಿಗೆ**

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

*****

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. ಕನ್ನಡ ವರ್ಣಮಾಲೆಯ ಅವರ್ಗೀಯ ವ್ಯಂಜನಗಳ ಸಂಖ್ಯೆ.

(ಎ) 06 (ಬಿ) 25
(ಸಿ) 13 (ಡಿ) 09

2. ‘ಮೂಗಾವುದ’ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(ಎ) ಅಂಶಿ ಸಮಾಸ (ಬಿ) ದ್ವಂದ್ವ ಸಮಾಸ
(ಸಿ) ದ್ವಿಗು ಸಮಾಸ (ಡಿ) ಗಮಕ ಸಮಾಸ

3. ತೃತೀಯಾ ವಿಭಕ್ತಿಯ ಕಾರಕಾರ್ಥ

(ಎ) ಅಧಿಕರಣ (ಬಿ) ಕರಣಾರ್ಥ
(ಸಿ) ಕರ್ಮಾರ್ಥ (ಡಿ) ಸಂಪ್ರದಾನ

4. ‘ಓದಲಿ’ ಪದವು ಈ ಕ್ರಿಯಾರೂಪಕ್ಕೆ ಸೇರಿದೆ

(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
(ಸಿ) ನಿಷೇಧಾರ್ಥಕ (ಡಿ) ನಕಾರಾತ್ಮಕ

5. 'ಬೇಗನೆ' ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ .

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅವಧಾರಣಾರ್ಥಕಾವ್ಯಯ

(ಸಿ) ಸಂಬಂಧಾರ್ಥಕಾವ್ಯಯ (ಡಿ) ಅನುಕರಣಾವ್ಯಯ

6. ಮಳೆಗಾಲದಲ್ಲಿ ಹೇಗಾದರೂ ಮಾಡಿ ರೋಗಗಳನ್ನು ನಿಯಂತ್ರಿಸಬೇಕೆಂದು ಸರ್ಕಾರ ತೀರ್ಮಾನಿಸಿದರೂ ಪ್ರಕೃತಿ ಅದಕ್ಕೆ ಸಹಕರಿಸಲಿಲ್ಲ. ಈ ವಾಕ್ಯವು–

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ (ಡಿ) ವಿಶೇಷ ವಾಕ್ಯ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ತಿನ್ನುತ್ತೇನೆ : ಉತ್ತಮ ಪುರುಷ : : ತಿನ್ನುತ್ತಾನೆ : ____________________

8. ಮೃದು : ಮಿದು : : ವ್ಯಾಘ್ರ : ____________________

9. ಯುಗಯುಗ : ದ್ವಿರುಕ್ತಿ : : ಮಂಡಲಗಿಂಡಲ : ____________________

10. ಮನುಷ್ಯ : ರೂಢನಾಮ : : ವಿದ್ವಾಂಸ : ________________

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **7*1=7**

11. ಒಂದು ಭಾಷೆ ಸತ್ವಪೂರ್ಣವಾಗಿರಬೇಕಾದರೆ ಅದನ್ನಾಡುವ ಜನ ಹೇಗಿರಬೇಕು?

12. ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಯಾವ ಕಣಿವೆಯನ್ನು ದಾಟಿ ಹೋಗ ಬೇಕಾಗಿತ್ತು?

13. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

14. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.

15. ಕವಿ ಶಿವರುದ್ರಪ್ಪನವರು ಯಾವ ಎಚ್ಚರದಲ್ಲಿ ಬದುಕಬೇಕಿದೆ ಎಂದು ಹೇಳಿದ್ದಾರೆ?

16. ದುರ್ಯೋಧನನು ಅರ್ಜುನ–ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಭೀಷ್ಮರಿಗೆ ಹೇಳಲು ಕಾರಣವೇನು?

17. ಪುಟ್ಟಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

18. ಹುಲಿ ನಿರಾಶೆಯಿಂದ ಕೋಪಗೊಂಡು ಗರ್ಜಿಸಿ ಏಕೆ ಪಲಾಯನ ಮಾಡಿತು?

19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

20. ವಿಶ್ವೇಶ್ವರಯ್ಯ ಅವರು ಹಣಕಾಸು ನೀತಿಯಲ್ಲಿ ಮಾಡಿದ ಮಾರ್ಪಾಡುಗಳಾವುವು?

21. ಅರಿವನ್ನು ಕುರಿತ ವಚನಕಾರರ ದೃಷ್ಟಿಯನ್ನು ವಿವರಿಸಿ.

22. ಮೇದಿನಿಪತಿ ನೀನು ಎಂದು ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು?

23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳಾವುವು?

24. 'ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ' ಬರಲು ವಸಂತನಿಗೂ ಹೆದರಿಕೆಯಾದದ್ದು ಏಕೆ?

25. ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಲು ಕಾರಣವೇನು?

26. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

27. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

28. ಎಂ.ಮರಿಯಪ್ಪ ಭಟ್ಟ

29. ದ.ರಾ.ಬೇಂದ್ರೆ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

ಳ್ಳೆನ್ನೆಮ್

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1*3=3**

31. ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

32. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.

**ಅಥವಾ**

ಆಳಾಗ ಬಲ್ಲವನು; ಅರಸಾಗಬಲ್ಲನು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

33. "ದೇವರೆ, ಮರಹತ್ತುವಷ್ಟು ಅವಕಾಶ ಕರುಣಿಸು"

34. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು"

35. "ಓಹೋ! ನನಗೆ ಗುಡಿಮನೆ ಕಟ್ತಾ ಇದ್ದೀರಾ?"

36. "ಪ್ರೀತಿಯ ಹಣತೆಯ ಹಚ್ಚೋಣ"

37. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"

38. "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4**

39. ನೆಲಕಿಜಿವೆನೆಂದು ಬಗೆದಿರೆ

____________________

____________________

____________________

______________ ಪುದುವಾಟ್ಟಿಪೆನೇ

**ಅಥವಾ**

ಪುಟ್ಟಿದ ನೂರ್ವರುಮೆನ್ನೊಡ

____________________

____________________

_______________________________

___________________ ಛಲಮನೆ ಮೆಱೆವೆಂ

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ.** **1*4=4**

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ

ಹೊಸಭರವಸೆಗಳ ಕಟ್ಟೋಣ

ಮನುಜರ ನಡುವಿನ ಅಡ್ಡಗೋಡೆಗಳ

ಕೆಡವುತ ಸೇತುವೆಯಾಗೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ? ವಿವರಿಸಿ.

42. 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

'ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು' ಎಂಬುದನ್ನು ದ.ರಾ. ಬೇಂದ್ರೆಯವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1*4=4 (2+2)**

43. ಕನ್ನಡ ಭಾಷೆ ತನ್ನ ಜೀವನದುದ್ದಕ್ಕೂ ಅನ್ಯ ಭಾಷೆಗಳ ಧಾಳಿಯನ್ನು ಎದುರಿಸುತ್ತಲೇ ಬಂದಿದೆ. ಈ ಧಾಳಿಯಲ್ಲಿ ಸಿಕ್ಕು ಗಾಸಿಯಾದ ಸಮಯದಲ್ಲಿ ಆಗಾಗ ಪುಣ್ಯ ಪುರುಷರು ಹುಟ್ಟಿ ಹೋರಾಡಿ ಅದನ್ನು ಬದುಕಿಸಿದ್ದಾರೆ. 12ನೆಯ ಶತಮಾನದಲ್ಲಿ ಕನ್ನಡವು ಸಂಸ್ಕೃತದಷ್ಟೇ ಸಮರ್ಥವಾದ ಭಾಷೆಯೆಂಬುದನ್ನು ಶರಣರು ದುಡಿದುತೋರಿಸಿದರು. 15ನೇ ಶತಮಾನದಲ್ಲಿ ಕನ್ನಡವು ಸಂಸ್ಕೃತದಷ್ಟೇ ಪೂಜ್ಯವಾದ ಭಾಷೆಯೆಂಬುದನ್ನು ದಾಸರು ನಡೆದು ತೋರಿಸಿದರು. ಇಂಥದೇ ಕಷ್ಟಕಾಲ 19ನೆಯ ಶತಮಾನದಲ್ಲಿ ಕನ್ನಡಕ್ಕೆ ಒದಗಿರಲು ಅದರ ಬೆನ್ನುಕಟ್ಟಿ ಹೋರಾಡಿದವರು ಡೆಪ್ಯೂಟಿ ಚೆನ್ನಬಸಪ್ಪನವರು. ಆಗ ಅನ್ಯಭಾಷೆಗಳು ಕನ್ನಡ ಭಾಷೆಯ ಕತ್ತನ್ನು ಹಿಸುಕುತ್ತಲಿದ್ದವು. ಓದು-ಬರೆಹ, ಮಾತು-ಕತೆಗಳಲ್ಲಿ ಕನ್ನಡವನ್ನು ಬಳಸುವುದು ಅಗೌರವವೆಂದು ಕನ್ನಡಿಗರೇ ಭಾವಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆ ಒಂದೂ ಇರಲಿಲ್ಲ. ಇದರಿಂದಾಗಿ ತನ್ನ ದೇಶದಲ್ಲಿಯೇ ಕನ್ನಡ ಭಾಷೆ ಪರದೇಶಿ ಮಗನಂತೆ ಬದುಕುತ್ತಲಿದ್ದಿತು. ಆಗ ಅದಕ್ಕೆ ಮನೆಯ ಮಗನ ಸ್ಥಾನ ಒದಗಿಸಿಕೊಟ್ಟವರು ಡೆಪ್ಯೂಟಿ ಚೆನ್ನಬಸಪ್ಪನವರು. ಈ ಕಾರಣಕ್ಕಾಗಿಯೇ ಜನರು ಅವರನ್ನು 'ಕನ್ನಡದ ಹುಲಿ' ಎಂದು ಕರೆಯುತ್ತಿದ್ದರು. 1866 ರಲ್ಲಿ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ ಮರಣ ಪರ್ಯಂತ ಎಂದರೆ 1881 ರವರೆಗೆ ಆ ಹುದ್ದೆಯಲ್ಲಿಯೇ ನಿಂತು ಕನ್ನಡಕ್ಕೆ ಇನ್ನೂ ಘನವಾದ ಸೇವೆ ಸಲ್ಲಿಸಿದರು. ಹೀಗಾಗಿ ಧಾರವಾಡ ಚೆನ್ನಬಸಪ್ಪ ಎನ್ನುವುದಕ್ಕೆ ಬದಲು ಡೆಪ್ಯೂಟಿ ಚೆನ್ನಬಸಪ್ಪ ಎಂಬ ಹೆಸರೇ ಪ್ರಚಾರ ಪಡೆಯಿತು. ಚೆನ್ನಬಸಪ್ಪನವರು ಹಳ್ಳಿ, ಪಟ್ಟಣ ಸಂಚರಿಸಿ ಕನ್ನಡವನ್ನೇ ಶಾಲೆಯಲ್ಲಿ ಕಲಿಸಲು ವ್ಯವಹಾರದಲ್ಲಿ ಬಳಸಲು ಸಾರ್ವಜನಿಕರಿಗೆ, ಶಿಕ್ಷಕರಿಗೆ ಪ್ರಾರ್ಥಿಸಿದರು, ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ 1855 ರಲ್ಲಿ ಬೆಳಗಾವಿ, ವಿಜಾಪುರ, ಧಾರವಾಡದಲ್ಲಿ 1, 3, 9, 12 ಇದ್ದ ಕನ್ನಡ ಶಾಲೆ 1882 ರ ವೇಳೆಗೆ 166, 150, 241 ಕ್ಕೆ ಏರಿತು. ಕನ್ನಡ ಪಂಡಿತರಿಂದ ಒಳ್ಳೆಯ ಪಠ್ಯಪುಸ್ತಕಗಳನ್ನು ಬರೆಯಿಸಿದರು. ಶಿಕ್ಷಕರು ಕನ್ನಡದ ಬದಲಿಗೆ ಮರಾಠಿ

ಪದಗಳನ್ನು ಬಳಸಿದರೆ ದಂಡ ವಿಧಿಸಿ ಕನ್ನಡ ಬಳಕೆಗೆ ಒತ್ತು ನೀಡಿದರು. ಕನ್ನಡ ಇವರ ಪ್ರಯತ್ನದಿಂದ ಮನೆಯ ಯಜಮಾನನ ಸ್ಥಾನ ಪಡೆಯುವಂತಾಯಿತು.

ಪ್ರಶ್ನೆಗಳು:

ಅ) 19ನೆಯ ಶತಮಾನದಲ್ಲಿ ಕನ್ನಡದ ಸ್ಥಿತಿ ಹೇಗಿತ್ತು ?

ಬ) ಕನ್ನಡದ ಹುಲಿ ಎನಿಸಿದ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ ಸಲ್ಲಿಸಿದ ಸೇವೆಯನ್ನು ಬರೆಯಿರಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

43. ನಿಮ್ಮನ್ನು ಮಧುಗಿರಿ ಸರ್ಕಾರಿ ಪ್ರೌಢಶಾಲೆಯ 'ವೆಂಕಟೇಶ' ಎಂದು ಭಾವಿಸಿಕೊಂಡು, ಶಾಲೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ..

**ಅಥವಾ**

ನಿಮ್ಮನ್ನು ತುಮಕೂರಿನ ನಿವಾಸಿ 'ಭರತ' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವಿದ್ಯಾಭ್ಯಾಸದ ಯೋಜನೆ, ಜೀವನದ ಗುರಿ ಬಗ್ಗೆ ತಿಳಿಸಿ ಬೆಂಗಳೂರಿನಲ್ಲಿ ವಾಸವಾಗಿರುವ 'ಸತ್ಯ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

45. ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

**ಅಥವಾ**

ನೈಸರ್ಗಿಕ ವಿಪತ್ತು ನಿರ್ವಹಣಾ ಕಾರ್ಯದಲ್ಲಿ ತಂತ್ರಜ್ಞಾನದ ಮಹತ್ತ್ವ.

# ಎಸ್.ಎಸ್.ಎಲ್.ಸಿ ಅರ್ಧವಾರ್ಷಿಕ ಪರೀಕ್ಷೆ ಸೆಪ್ಟಂಬರ್–2025

**S.S.L.C MIDTERM EXAMINATION JANUARY 2025**

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

ದಿನಾಂಕ : 12.09.2025 | ವಿಷಯ ಸಂಕೇತ : 01K

ಸಮಯ : 3 ಗಂಟೆ 15 ನಿಮಿಷ | ಮೌಲ್ಯಮಾಪನ ಸೂಚಿ (ಮಾದರಿ ಉತ್ತರ) | ಗರಿಷ್ಠ ಅಂಕಗಳು : 100

---

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6*1=6**

1. ಕನ್ನಡ ವರ್ಣಮಾಲೆಯ ಅವರ್ಗೀಯ ವ್ಯಂಜನಗಳ ಸಂಖ್ಯೆ.
   - (ಎ) 06
   - (ಬಿ) 25
   - (ಸಿ) 13
   - **(ಡಿ) 09**

2. 'ಮೂಗಾವುದ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   - (ಎ) ಅಂಶಿ ಸಮಾಸ
   - (ಬಿ) ದ್ವಂದ್ವ ಸಮಾಸ
   - **(ಸಿ) ದ್ವಿಗು ಸಮಾಸ**
   - (ಡಿ) ಗಮಕ ಸಮಾಸ

3. ತೃತೀಯಾ ವಿಭಕ್ತಿಯ ಕಾರಕಾರ್ಥ
   - (ಎ) ಅಧಿಕರಣ
   - **(ಬಿ) ಕರಣಾರ್ಥ**
   - (ಸಿ) ಕರ್ಮಾರ್ಥ
   - (ಡಿ) ಸಂಪ್ರದಾನ

4. 'ಓದಲಿ' ಪದವು ಈ ಕ್ರಿಯಾರೂಪಕ್ಕೆ ಸೇರಿದೆ
   - **(ಎ) ವಿಧ್ಯರ್ಥಕ**
   - (ಬಿ) ಸಂಭಾವನಾರ್ಥಕ
   - (ಸಿ) ನಿಷೇಧಾರ್ಥಕ
   - (ಡಿ) ನಕಾರಾತ್ಮಕ

5. 'ಬೇಗನೆ' ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ .
   - **(ಎ) ಸಾಮಾನ್ಯಾರ್ಥಕಾವ್ಯಯ**
   - (ಬಿ) ಅವಧಾರಣಾರ್ಥಕಾವ್ಯಯ
   - (ಸಿ) ಸಂಬಂಧಾರ್ಥಕಾವ್ಯಯ
   - (ಡಿ) ಅನುಕರಣಾವ್ಯಯ

6. ಮಳೆಗಾಲದಲ್ಲಿ ಹೇಗಾದರೂ ಮಾಡಿ ರೋಗಗಳನ್ನು ನಿಯಂತ್ರಿಸಬೇಕೆಂದು ಸರ್ಕಾರ ತೀರ್ಮಾನಿಸಿದರೂ ಪ್ರಕೃತಿ ಅದಕ್ಕೆ ಸಹಕರಿಸಲಿಲ್ಲ. ಈ ವಾಕ್ಯವು–
   - (ಎ) ಸಾಮಾನ್ಯವಾಕ್ಯ
   - (ಬಿ) ಸಂಯೋಜಿತ ವಾಕ್ಯ
   - **(ಸಿ) ಮಿಶ್ರವಾಕ್ಯ**
   - (ಡಿ) ವಿಶೇಷ ವಾಕ್ಯ

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. **4*1=4**

7. ತಿನ್ನುತ್ತೇನೆ : ಉತ್ತಮ ಪುರುಷ : : ತಿನ್ನುತ್ತಾನೆ : **ಪ್ರಥಮ ಪುರುಷ**

8. ಮೃದು : ಮಿದು : : ವ್ಯಾಘ್ರ : ಬಗ್ಗ

9. ಯುಗಯುಗ : ದ್ವಿರುಕ್ತಿ : : ಮಂಡಲಗಿಂಡಲ : ಜೋಡಿಪದ

10. ಮನುಷ್ಯ : ರೂಢನಾಮ : : ವಿದ್ವಾಂಸ : ಅನ್ವರ್ಥಕ ನಾಮ

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 7*1=7**

**11. ಒಂದು ಭಾಷೆ ಸತ್ವಪೂರ್ಣವಾಗಿರಬೇಕಾದರೆ ಅದನ್ನಾಡುವ ಜನ ಹೇಗಿರಬೇಕು?**

❖ ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ **ಅಭಿಮಾನಧನರೂ ಬುದ್ಧಿಶಾಲಿಗಳೂ ಪ್ರಯೋಗಶೀಲರೂ ಆಗಿರಬೇಕು.**

**12. ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಯಾವ ಕಣಿವೆಯನ್ನು ದಾಟಿ ಹೋಗ ಬೇಕಾಗಿತ್ತು?**

❖ ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ **ಮದಲಿಂಗನ ಕಣಿವೆಯನ್ನು** ದಾಟಿ ಹೋಗಬೇಕಾಗಿತ್ತು.

**13. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

❖ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ **ನಾಲ್ವಡಿ ಕೃಷ್ಣರಾಜ ಒಡೆಯರು** ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.

**14. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.**

❖ **ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ** ಅದು ದೇವನೂರು ಮಹಾದೇವ ಅವರ ದೇವರು ಆಗುತ್ತದೆ.

**15. ಕವಿ ಶಿವರುದ್ರಪ್ಪನವರು ಯಾವ ಎಚ್ಚರದಲ್ಲಿ ಬದುಕಬೇಕಿದೆ ಎಂದು ಹೇಳಿದ್ದಾರೆ?**

❖ ಕವಿ ಶಿವರುದ್ರಪ್ಪನವರು **ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ** ಬದುಕಬೇಕಿದೆ ಎಂದು ಹೇಳಿದ್ದಾರೆ.

**16. ದುರ್ಯೋಧನನು ಅರ್ಜುನ-ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಭೀಷ್ಮರಿಗೆ ಹೇಳಲು ಕಾರಣವೇನು?**

❖ ದುರ್ಯೋಧನನ **ಗೆಳೆಯನಾದ ಕರ್ಣ ಮತ್ತು ತಮ್ಮನಾದ ದುಶ್ಶಾಸನನ್ನು ಅರ್ಜುನ-ಭೀಮರು ಕೊಂದದ್ದರಿಂದ** ದುರ್ಯೋಧನನು ಅರ್ಜುನ-ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಭೀಷ್ಮರಿಗೆ ಹೇಳುತ್ತಾನೆ.

**17. ಪುಟ್ಟಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?**

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

**18. ಹುಲಿ ನಿರಾಶೆಯಿಂದ ಕೋಪಗೊಂಡು ಗರ್ಜಿಸಿ ಏಕೆ ಪಲಾಯನ ಮಾಡಿತು?**

❖ ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೊಗಿದ್'ದ, ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದಾಗ **ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು.** ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಘರ್ಜನೆ ಕೇಳಿಸಿತು. **ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು.** ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆ ಹೊಂದಿ, ಕೋಪದಿಂದ ಘರ್ಜಿಸಿ ಹುಲಿ ಪಲಾಯನ ಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, **ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು.** ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

---

**19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

❖ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರು, **1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ** ಮುಂತಾದ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳನ್ನಾಗಿ ಮಾಡಿದರು.

---

**20. ವಿಶ್ವೇಶ್ವರಯ್ಯ ಅವರು ಹಣಕಾಸು ನೀತಿಯಲ್ಲಿ ಮಾಡಿದ ಮಾರ್ಪಾಡುಗಳಾವುವು?**

❖ ವಿಶ್ವೇಶ್ವರಯ್ಯ ಅವರು ಕ್ರಿ.ಶ. **1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು**. ಕೈಗಾರಿಕೆಗಳ ಅಭಿವೃದ್ಧಿಗೆ **ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ** ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. **ಸಾರ್ವಜನಿಕ ಜೀವವಿಮಾ ಯೋಜನೆ** ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು **ಪ್ರಾಂತೀಯ ಸಹಕಾರಿ ಬ್ಯಾಂಕ್**ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ **ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು**.

---

**21. ಅರಿವನ್ನು ಕುರಿತ ವಚನಕಾರರ ದೃಷ್ಟಿಯನ್ನು ವಿವರಿಸಿ.**

❖ ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು **ಕ್ರಿಯೆಯ ಅನುಭವದಿಂದ ಒಡಮೂಡುವುದು.** ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. **ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.**

---

**22. ಮೇದಿನಿಪತಿ ನೀನು ಎಂದು ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು?**

❖ "ಕರ್ಣ **ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ.** ನಿನ್ನಾಣೆ. ನೀನು ನಿಜವಾಗಿ **ಭೂಮಿಯ ಒಡೆಯ.** ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.

---

**23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳಾವುವು?**

❖ ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ **ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು"** ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

---

**24. 'ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ಬರಲು ವಸಂತನಿಗೂ ಹೆದರಿಕೆಯಾದದ್ದು ಏಕೆ?**

❖ ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಗೂರುತ್ತ(ಕೆಮ್ಮುತ್ತಾ) ಮಲಗಿದ್ದಾಳೆ. ಅಮ್ಮನ ತೂತು ಬಿದ್ದ **ಸೀರೆಯಲಿ ಬಾಲ ರವಿ ಸೋರಗಿದ್ದಾನೆ**. **ಸುಣ್ಣ ಕಾಣದ ಗೋಡೆಗಳು ಮುಖ** ಮುಚ್ಚಿಕೊಂಡಿವೆ. **ಕತ್ತಲೆ ಗವಿಯಂತಿರುವ ಗುಡಿಸಲೊಳಗೆ** ಬರಲು ವಸಂತನಿಗೂ ಹೆದರಿಕೆ! ಈ ರೀತಿಯಾಗಿ ಪುಟ್ಟ ಪೋರಿಯ ಮನೆಯ ಪರಿಸ್ಥಿತಿ ಇದೆ.

---

**25. ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಲು ಕಾರಣವೇನು?**

❖ ಎಲ್ಲ ಮಕ್ಕಳೂ ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು. ಆದರೆ, **ಹನ್ನೆರಡು ವರ್ಷದ ಬಾಲಕ ಭಗತ್‌ಸಿಂಗ್ ಮಾತ್ರ ಮನೆಗೆ ಬಂದಿರಲಿಲ್ಲ.** ಅವನ ತಂದೆ ತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಯಿತು. ಸಂಜೆ ತಡವಾಗಿ ಬಾಲಕ ಮನೆಯೊಳಕ್ಕೆ ಕಾಲಿಟ್ಟ. ಅವನ ತಂಗಿ ಕೂಗಿಕೊಂಡಳು, **"ವೀರಾಜಿ ಬಂದ.... ವೀರಾಜಿ ಬಂದ...."**

ಅವನಮ್ಮ ಓಡಿ ಬಂದು ಬಾಲಕನನ್ನು ಬಿಗಿಯಾಗಿ ಅಪ್ಪಿದಳು. ಹೀಗೆ ಮಗನನ್ನು ನೋಡಿದ ತಾಯಿಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತ್ತು.

---

**26. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

❖ ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ಇಂಗ್ಲೆಂಡ್‌ಗೆ ಹೋಗುವವರೆಗೆ ನನ್ನಲ್ಲಿ ಇತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, 'ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ **ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ'** ಎಂದು ಗಾಂಧೀಜಿಯವರು ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ 'ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಗಾಂಧೀಜಿಯವರು ಅರಿತಿದ್ದರು ಹಾಗೂ ಅವರು ತಮ್ಮ ಬರೆಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದ್ದರು.

---

**27. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

❖ ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗಬೇಕಾದರೆ; ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಆದರೆ ಅವರಿಗೆ ಮತ್ತೊಂದು ಅವಶ್ಯಕತೆ ಇದೆ. ಅದು ಸಂಸ್ಕೃತಿ. ನಾವು ಅವರಿಗೆ ಈ ಸಂಸ್ಕೃತಿಯನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಅಂದರೆ **ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗುವುದು.** ಇದು ವಿವೇಕಾನಂದರ ದೃಷ್ಟಿಯಾಗಿದೆ.

---

## V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

**28. ಎಂ.ಮರಿಯಪ್ಪ ಭಟ್ಟ**

❖ ಎಂ.ಮರಿಯಪ್ಪ ಭಟ್ಟರು ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ **'ಕಬಕ'** ಗ್ರಾಮದಲ್ಲಿ **ಸಾ.ಶ.೧೯೦೬ರಲ್ಲಿ** ಜನಿಸಿದ್ದಾರೆ. ಬಹುಭಾಷಾ ವಿದ್ವಾಂಸರಾದ ಇವರು **'ತುಳು-ಇಂಗ್ಲಿಷ್ ನಿಘಂಟು'**, **'ಅಭಿನವಮಂಗರಾಜನ ನಿಘಂಟು'**, **'ಜಾತಕತಿಲಕಂ'**, 'ಛಂದಸ್ಸಾರ' 'ಕನ್ನಡ ಸಂಸ್ಕೃತಿ'(ಪ್ರಬಂಧ ಸಂಕಲನ)ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **'ಕರ್ನಾಟಕ ಸರ್ಕಾರದ ಪುರಸ್ಕಾರ', 'ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** ಲಭಿಸಿವೆ.

---

**29. ದ.ರಾ.ಬೇಂದ್ರೆ**

❖ **ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ದತ್ತಾತ್ರೇಯ ರಾಮಚಂದ್ರ ಬೇಂದ್ರೆ**ಯವರು ಕ್ರಿ.ಶ **1896**ರಲ್ಲಿ **ಧಾರವಾಡ**ದಲ್ಲಿ ಜನಿಸಿದರು. ಇವರು **ಗರಿ, ಕೃಷ್ಣಕುಮಾರಿ,** ಉಯ್ಯಾಲೆ, **ಸಖೀಗೀತ, ನಾದಲೀಲೆ,** ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಅರಳು-ಮರಳು ಕವನ ಸಂಕಲನಕ್ಕೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,** ನಾಕುತಂತಿ ಕವನಸಂಕಲನಕ್ಕೆ **ಜ್ಞಾನಪೀಠ ಪ್ರಶಸ್ತಿ,** ಭಾರತ ಸರ್ಕಾರದ **ಪದ್ಮಶ್ರೀ** ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

---

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

**30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು**

**ಳ್ಳನ್ನೆಮ್**

ಭ ರ ನ ಭ ಭ ರ ಲಗು

_UU|_U_|UUU|_UU|_UU|_U_|U_|

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ |ಪಾರ್ಥಭೀ|ಮರು|

ಳ್ಳನ್ನೆಮ್

ಈ ಮೇಲಿನ ಪದ್ಯವು ಅಕ್ಷರಗಣದ **'ಉತ್ಪಲಮಾಲಾ ವೃತ್ತ'**ದಲ್ಲಿ ರಚಿತವಾಗಿದೆ.

---

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1*3=3**

**31. ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ**

- **ಅಲಂಕಾರ : ಉಪಮಾಲಂಕಾರ**

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳನ್ನು ಪರಸ್ಪರ ಹೋಲಿಸಿ ವರ್ಣಿಸುವುದರಿಂದ ಉಪಮಾಲಂಕಾರ.

**ಉಪಮೇಯ :** ನೀಚರಿಗೆ ಮಾಡಿದ ಉಪಕಾರ

**ಉಪಮಾನ :** ಹಾವಿಗೆ ಹಾಲೆರೆಯುವುದು

**ಉಪಮವಾಚಕ : ಅಂತೆ**

**ಸಾಧಾರಣ ಧರ್ಮ :** ಸ್ಪಷ್ಟವಾಗಿಲ್ಲ

**ಸಮನ್ವಯ :** ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು, ಉಪಮಾನವಾದ ಹಾವಿಗೆ ಹಾಲೆರೆಯುವುದಕ್ಕೆ ಹೋಲಿಸಿ ವರ್ಣಿಸಿರುವುದರಿಂದ ಉಪಮಾಲಂಕಾರವಾಗಿದೆ.

---

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

**32. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.**

- ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ'** ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'** ಎಂಬ ಗಾದೆಯೂ ಒಂದಾಗಿದೆ.

ಈ ಗಾದೆಯು ಕಷ್ಟಪಡದೇ ಸುಖ ಸಿಗುವುದಿಲ್ಲ ಎಂಬುದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ. ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ.ಬಸವಣ್ಣನವರ **'ಕಾಯಕವೇ ಕೈಲಾಸ'** ಎಂಬ ಮಾತು ಮೇಲಿನ ಗಾದೆಯನ್ನು ಪುಷ್ಟಿಕರೀಸುತ್ತದೆ. ಕೈಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖವುಂಟು ಎಂದರ್ಥ. ಸೋಮಾರಿಯಾಗಿ ಸುಮ್ಮನೆ ಕುಳಿತುಕೊಳ್ಳಬಾರದು. ಯಾವುದಾದರೊಂದು ಕೆಲಸ ಮಾಡುವುದರಿಂದ ನಮ್ಮ ಹೊಟ್ಟೆ ತುಂಬುತ್ತದೆ. ನಮ್ಮ ಬಾಯಿ ಮೊಸರಿನ ರುಚಿ ನೋಡುವಂತಾಗುತ್ತದೆ. "ಛೀ! ಕೈ ಕೆಸರಾಗುವುದಲ್ಲಾ. ಈ ಕೆಲಸ ಮಾಡುವುದಾದರೂ ಹೇಗೆ?" ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಸಂಪಾದನೆಯಾಗದಿದ್ದರೆ ಹೊಟ್ಟೆ

ತುಂಬುವುದಿಲ್ಲ . ಜೀವನ ಸುಖವಾಗಿ ಸಾಗಬೇಕಾದರೆ ಕೈ ಕೆಸರಾಗಲೇ ಬೇಕು; ಕೈ ತುಂಬಾ ಸಂಪಾದನೆಯಾಗಲೇಬೇಕು. ಆಗ ನಮಗೆ ಒಳ್ಳೆಯ ಊಟ, ಆಹಾರ ಸಿಗುವಂತಾಗುತ್ತದೆ. ಅದಕ್ಕೇ ಹಿರಿಯರು ಹೇಳಿದ್ದು –'ಕೈ ಕೆಸರಾದರೆ ಬಾಯಿ ಮೊಸರು'

**ಅಥವಾ**

***–ಆಳಾಗ ಬಲ್ಲವನು; ಅರಸಾಗಬಲ್ಲನು.***

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಆಳಾಗಬಲ್ಲವನು; ಅರಸಾಗಬಲ್ಲನು' ಎಂಬ ಗಾದೆಯೂ ಒಜಿದಾಗಿದೆ.

ಅರಸನು ಅರವತ್ತನಾಲ್ಕು ವಿದ್ಯೆಗಳಲ್ಲಿ ಪ್ರವೀಣಾಗಿರಬೇಕು. ಆಳಿನಂತೆ ಕೆಲಸ ನಿರ್ವಹಿಸುವುದು ಅದರಲ್ಲಿ ಒಂದು. ಒಂದು ರಾಜನು ಸಾಮಾನ್ಯ ಜನರ ಕಷ್ಟ ಸುಖವನ್ನು ಅರ್ಥೈಯಿಸಿಕೊಳ್ಳಬೇಕಾದರೆ ಅವರಲ್ಲಿ ಒಬ್ಬನಾಗಿ ಅವನಿಗೆ ಅನುಭವ ಇರಬೇಕು. ಕೆಲಸದವನಾಗಿದ್ದು ಕಷ್ಟಗಳನ್ನು ಕಂಡರೆ, ಅನುಭವಿಸಿದರೆ ಮಾತ್ರ ಅವನು ಒಳ್ಳೆಯ ರಾಜನಾಗಬಲ್ಲ. ಸುಖದ ಸುಪ್ಪತ್ತಿಗೆಯಲ್ಲೇ ಇದ್ದು, ಬಡವರಿಗೆ ಸಹಾಯ ಮಾಡಬಹುದು. ಕಾಯಕದ ಮಹತ್ವವನ್ನು ಬಡವರು ಶ್ರೀಮಂತರೆನ್ನದೆ ತಿಳಿದುಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ ಗೃಹ ಕೃತ್ಯಗಳನ್ನು ಮಾಡುವುದು ಅವಮಾನ, ಎರಡು ಪದವಿಗಳನ್ನು ಪಡೆದಿರುವವನು, ಹಳ್ಳಿಯಲ್ಲಿ ಕೃಷಿಮಾಡುವುದು ಅವಮಾನ ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ. **ಆಳಾಗಿ ದುಡಿ ಅರಸನಾಗಿ ಮೆರೆ** ಎಂಬ ಮಾತು ಈ ಗಾದೆಯ ಮಾತನ್ನು ಸಮರ್ಥಿಸುತ್ತದೆ.

---

## IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18

**33. "ದೇವರೆ, ಮರಹತ್ತುವಷ್ಟು ಅವಕಾಶ ಕರುಣಿಸು"**

❖ ಆಯ್ಕೆ :- ಈ ವಾಕ್ಯವನ್ನು 'ಎ.ಎನ್.ಮೂರ್ತಿರಾವ್' ಅವರು ರಚಿಸಿರುವ 'ಸಮಗ್ರ ಲಲಿತಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :- ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳುವಾಗ, ಒಂದು ಕ್ಷಣವಾದರೂ ಹುಲಿಗೆ ಅವರ ಮುಖ ದರ್ಶನವಾಗಲಿಲ್ಲ. ಆದರೆ ಈ ದೊಂಬರಾಟವನ್ನು ಎಷ್ಟು ಕಾಲ ನಡೆಸಲು ಸಾಧ್ಯ! ಶಾನುಭೋಗರ ತಲೆ ಸುತ್ತಲಾರಂಭಿಸಿತು. ಆಗ ಶಾನುಭೋಗರಿಗೆ ನೆನಪಾಗಿದ್ದು ಖಿರ್ದಿ ಪುಸ್ತಕ. ಆಗ ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ :- 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ..

---

**34. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು"**

❖ ಆಯ್ಕೆ : ಈ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ "ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು" ಎಂಬ ಪ್ರವಾಸ ಕಥನದಿಂದ ಆಯ್ದ "ಭಾಗ್ಯಶಿಲ್ಪಿಗಳು" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದ ವಿಶ್ವೇಶ್ವರಯ್ಯನವರು "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಶಿಕ್ಷಣದ ಮಹತ್ವನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಿಹಾರ. ಆದ್ದರಿಂದ ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು ಎಂಬ ವಿಶ್ವೇಶ್ವರಯ್ಯನವರ ಆಶಯ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**35. "ಓಹೋ! ನನಗೆ ಗುಡಿಮನೆ ಕಟ್ತಾ ಇದ್ದೀರಾ?"**

❖ **ಆಯ್ಕೆ :** ಪ್ರಸ್ತುತ ವಾಕ್ಯವನ್ನು 'ದೇವನೂರು ಮಹಾದೇವ' ಅವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :** ಒಂದ್ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲ್ಸ ನಿಲ್ಲಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ. 'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?' 'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ'. ಎಂದು ಅಲ್ಲೊಬ್ಬ ಹೇಳಿದ ಸಂದರ್ಭದಲ್ಲಿ ಈ ಮಾತು ಮೂಡಿ ಬಂದಿದೆ.
**ಸ್ವಾರಸ್ಯ :** ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸರ್ವಸಮಾನತೆ ಮನೋಭಾವ ಮೂಡಿಸಿಕೊಂಡು ಬದುಕಬೇಕು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

---

**36. "ಪ್ರೀತಿಯ ಹಣತೆಯ ಹಚ್ಚೋಣ"**

❖ **ಆಯ್ಕೆ :-** ಈ ವಾಕ್ಯವನ್ನು ಕವಿ 'ಜಿ.ಎಸ್.ಶಿವರುದ್ರಪ್ಪ' ಅವರು ರಚಿಸಿರುವ 'ಎದೆತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :-** ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ಕತ್ತಲೆಯು ನಮ್ಮ ಸುತ್ತಲೂ ಕವಿದಿರುತ್ತದೆ, ಆದುದರಿಂದ ಆ ಕತ್ತಲೆಯನ್ನು ಓಡಿಸಲು ಬೆಳಕಿನ ಅವಶ್ಯಕತೆಯಿದೆ. ಬೆಳಕನ್ನು ಬೀರಲು ಪ್ರೀತಿಯಿಂದ ಹಣತೆಯನ್ನು ಹಚ್ಚಬೇಕಾಗಿದೆ. ಅದಕ್ಕಾಗಿ "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :-** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

---

**37. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"**

❖ **ಆಯ್ಕೆ :-** ಈ ವಾಕ್ಯವನ್ನು ಕುಮಾರವ್ಯಾಸನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :-** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀಕಷ್ಣನು ಕರ್ಣನಿಗೆ ಆತನ ಜನ್ಮ ವೃತ್ತಾಂತವನ್ನು ತಿಳಿಸುತ್ತಾ, ಪ್ರತಿಯೊಬ್ಬ ಪಾಂಡವರ ಜನ್ಮವೃತ್ತಾಂತದ ಬಗ್ಗೆ ವಿವರಿಸಿರುವುದು ಶ್ರೀಕೃಷ್ಣನ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**38. "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು"**

❖ **ಆಯ್ಕೆ :–** ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆಱೆವೆಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಸಂಧಿಗೆ ಒಪ್ಪದ ದುರ್ಯೋಧನನು, ನನ್ನ ಪ್ರೀತಿಯ ಗೆಳೆಯನನ್ನು, ನನ್ನ ಪ್ರೀತಿಯ ತಮ್ಮನನ್ನು ಕೊಂದ ಅರ್ಜುನ–ಭೀಮರು ಜೀವಂತವಾಗಿರುವವರೆಗೆ, ನನ್ನ ದೇಹದಲ್ಲಿ ಪ್ರಾಣವಿರುವವರೆಗೆ, ಸಂಧಿಗೆ ಒಪ್ಪಲಾರೆನು ಎಂದು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ತನ್ನ ಕೊನೆಯುಸಿರು ಇರುವವರೆಗೂ ಪಾಂಡವರ ವಿರುದ್ಧ ಹೋರಾಡುತ್ತೇನೆಂಬ ದುರ್ಯೋಧನನ ದಿಟ್ಟ ನಿರ್ಧಾರ,ಪಾಂಡವರ ಮೇಲಿನ ಕೋಪದ ತೀವ್ರತೆ ಈ ಸಂದರ್ಭದಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4**

39.

ನೆಲಕಿಜಿವೆನೆಂದು ಬಗೆದಿರೆ।
ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ॥
ಟ್ಟೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ॥

ಪುಟ್ಟಿದ ನೂರ್ವರುಮೆನ್ನೊಡ।
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥
ಪುಟ್ಟಿ ಪೊದೞ್ದುದು ಸತ್ತರ್
ಪುಟ್ಟರೆ ಪಾಂಡವರೊಳಿಜಿದು ಛಲಮನೆ ಮೆಱೆವೆಂ॥

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4**

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸಭರವಸೆಗಳ ಕಟ್ಟೋಣ
ಮನುಜರ ನಡುವಿನ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

❖ ಪ್ರಸ್ತುತ ಪದ್ಯಭಾಗವನ್ನು 'ಜಿ.ಎಸ್.ಶಿವರುದ್ರಪ್ಪ' ವಿರಚಿತ 'ಎದೆ ತುಂಬಿ ಹಾಡುವೆನು' ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು.ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎಂಬ ಆಶಯವನ್ನು ಪ್ರಸ್ತುತ ಪದ್ಯಭಾಗ ಒಳಗೊಂಡಿದೆ.

ಬಡತನ, ಅಜ್ಞಾನ, ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಆಸರೆ ನೀಡಿ ಮೇಲೆ ತರಬೇಕು. ಅವರ ಮನಸ್ಸಿನಲ್ಲಿ ಬದುಕುವ ಹೊಸ ಭರವಸೆಗಳನ್ನು ಕೊಡಬೇಕು. ಹಾಗೆಯೇ ಮನುಷ್ಯರ ನಡುವೆ ಜಾತಿ, ಧರ್ಮ, ಭಾಷೆ, ವರ್ಣಗಳಿಂದ ಆವೃತವಾದ ಅಡ್ಡಗೋಡೆಗಳನ್ನು ಕೆಡವಿಹಾಕಬೇಕು.

**ಮೌಲ್ಯ:**ವಿಶ್ವದ ಜನರೆಲ್ಲರನ್ನು ಒಂದಾಗಿಸುವ ಪ್ರೀತಿ–ಸ್ನೇಹವೆಂಬ ಮಾನವೀಯತೆಯ ಸೇತುವೆಯನ್ನು ನಿರ್ಮಿಸೋಣವೆಂದು ಕವಿ ಕವಿ ಜಿ.ಎಸ್.ಶಿವರುದ್ರಪ್ಪನವರು **ಸಮಾನತೆಯ ಮೌಲ್ಯವನ್ನು** ಹೇಳಿದ್ದಾರೆ.

---

## XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8

**41. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

❖ ಒಂದು **ಭಾಷೆ ಸತ್ವಪೂರ್ಣವಾಗಿ ವಿಕಾಸವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ ಬುದ್ಧಿಶಾಲಿಗಳೂ ಪ್ರಯೋಗಶೀಲರೂ ಆಗಿರಬೇಕು.** ಉದಾಹರಣೆಗೆ: ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಕಾರಣ ಆಂಗ್ಲ ಜನರ ಸಂಕಲ್ಪ, ಭಾಷಾಕೃಷಿ ಕಾರಣವೆಂದು ಹೇಳಬಹುದು. **ಆಂಗ್ಲ ಜನರು ಸಾಹಸಜೀವಿಗಳು, ಬುದ್ಧಿಶಾಲಿಗಳಾಗಿದ್ದರು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು.** ಈ ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಅಲ್ಲಿನ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರಮುಂತಾದುವುಗಳನ್ನು ಆಂಗ್ಲಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. **ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು** ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಅವರ ಭಾಷೆ ಸತ್ವಪೂರ್ಣವಾಗಿ ವಿಕಾಸಗೊಂಡಿತು.

ಹಾಗೆಯೇ **ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ, ಪ್ರೀತಿಸಿ ಅಭಿವೃದ್ಧಿಗೊಳಿಸಬೇಕು.** ನೆರೆಹೊರೆಯ ಭಾಷೆಗಳಲ್ಲಿ ಕೊಳುಕೊಡುಗೆಯ ವ್ಯವಹಾರ ನಡೆದೇ ನಡೆಯುತ್ತದೆ. ನಡೆಯಲೇಬೇಕು. **ಅದು ಸಜೀವ ಭಾಷೆಯ ಲಕ್ಷಣ.** ಆದರೆ ಸ್ವೀಕರಿಸುವಾಗ ತನ್ನತನವನ್ನು ಕಳೆದುಕೊಳ್ಳದಂತೆ ಕಾಪಾಡಿಕೊಳ್ಳಬೇಕು. ಸ್ವಾಭಾವಿಕವಾಗಿ ಗಡಿ ಜನರ ವ್ಯವಹಾರ ಸಂಪರ್ಕಗಳಿಂದ ನೆರಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಅದರ ನೆರನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದಿ ಭಾಷೆ ಸತ್ವಪೂರ್ಣವಾಗಿ ವಿಕಾಸವಾಗಲು ಸಾಧ್ಯವಾಗುತ್ತದೆ.

**ಅಥವಾ**

***–ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ? ವಿವರಿಸಿ.***

❖ ಕನ್ನಡ ಭಾಷೆಗೆ ಪ್ರಾಚೀನ ಕಾಲದಿಂದಲೂ **ಸಂಸ್ಕೃತ ಭಾಷೆಯ ಪೋಷಣೆ** ದೊರೆಯುತ್ತಾ ಬಂದಿದೆ. ಕನ್ನಡದ ಪಂಡಿತರು ವೈದಿಕ ಹಾಗೂ ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ವಿವರಿಸಲು ಅಭಿಲಾಷೆಯಿಂದ **ಕಾವ್ಯಗಳನ್ನು ರಚಿಸಿದರು.** ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. **ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ** ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು **ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದ್ದೂ** ಆಯಿತು.

ಸಂಸ್ಕೃತ, ಪ್ರಾಕೃತ ಭಾಷೆಗಳಿಂದ(ತತ್ಸಮ ತದ್ಭವಗಳಾಗಿ) ಅನೇಕ ಶಬ್ದಗಳನ್ನು ಕನ್ನಡ ತನ್ನಲ್ಲಿ ಅಳವಡಿಸಿಕೊಂಡಿದೆ. **ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ.** ಅಸಂಖ್ಯಾತ ಇಂಗ್ಲಿಷ್ ಶಬ್ದಗಳು ಕನ್ನಡದ ಉಡುಪನ್ನು ಧರಿಸಿ ಒಳಗೆ ಬಂದು ಬಿಟ್ಟಿವೆ. ಸ್ವಾಭಾವಿಕವಾಗಿ ಗಡಿ ಜನರ ವ್ಯವಹಾರ ಸಂಪರ್ಕಗಳಿಂದ ನೆರೆಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಇದರಿಂದ **ಕನ್ನಡವೂ ಅದರ ನೆರನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ.** ಜೊತೆಗೆ ಭಾಷೆಯಲ್ಲಿರುವ ಸಾಮಗ್ರಿಯನ್ನೇ(ಪದಗಳನ್ನು) ಬಳಸಿಕೊಂಡು ನುಡಿಗಟ್ಟುಗಳಾಗಿ ಮಾಡಿಕೊಂಡು ಕನ್ನಡ ಭಾಷೆಯು ಸಮೃದ್ಧವಾಗಿ ರೂಪಗೊಂಡಿತು.

---

**41. 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

❖ ಚಲನಶೀಲತೆ ಜೀವಂತಿಕೆಯ ಗುಣ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತಿದೆ. ಅದಕ್ಕೆ ತಡೆ ಎಂಬುದಿಲ್ಲ. ಕವಿ **ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ.** ಜಗತ್ತಿನಲ್ಲಿ ಹಗಲು ಇರುಳು ಒಂದರ ಹಿಂದೆ ಒಂದು ಬರುತ್ತದೆ. ಇದನ್ನು ಕವಿ ಹಕ್ಕಿಯು ರೆಕ್ಕೆಗಳನ್ನು ಬಡಿಯುವುದಕ್ಕೆ ಹೋಲಿಸಿ ರೆಕ್ಕೆ ಒಮ್ಮೆ ಕೆಳಗೆ ಒಮ್ಮೆ ಮೇಲೆ ಬಡಿದು ಮುಂದೆ ಸಾಗುತ್ತದೆ. ಹಾಗೆಯೇ ಹಗಲು ರಾತ್ರಿಗಳು ನಡೆಯುತ್ತಾ ಕಾಲವು ಮುಂದೆ ಸಾಗುತ್ತಿದೆ ಎಂದಿದ್ದಾರೆ.

ಹಕ್ಕಿಗೆ **ಕಪ್ಪು, ಬಿಳಿ ಬಣ್ಣದ ಪುಚ್ಚಗಳು, ಬಿಳಿ ಹೊಳೆ ಬಣ್ಣದ ಗರಿಗಳು, ಕೆಂಪು ಹಳದಿ ಬಣ್ಣದ ರೆಕ್ಕೆಗಳು ಇವೆ** ಎಂದು ಹೇಳಿದ್ದಾರೆ. ಈ ಮೂಲಕ ರಾತ್ರಿ, ಹಗಲು, ಮುಂಜಾನೆ, ಸಂಜೆಯ ಬಣ್ಣಗಳನ್ನು ಹಕ್ಕಿಯ ಪುಚ್ಚ ಮತ್ತು ಗರಿಗಳಿಗೆ ಸಮೀಕರಿಸಿದ್ದಾರೆ. ಸೂಚ್ಯವಾಗಿ **ಭೂತ, ವರ್ತಮಾನ, ಭವಿಷ್ಯತ್‌ಕಾಲಗಳಿಗೆ ಹಕ್ಕಿಯ ಹಾರಾಟವನ್ನು ಹೋಲಿಸಿದ್ದಾರೆ.** ಕಾಲದ ಗತಿಯಲ್ಲಿ ಹಲವು ಸಾಮ್ರಾಜ್ಯಗಳು, ರಾಜ್ಯಗಳು, ಮಂಡಲಗಳು ಉನ್ನತಿ ಅವನತಿ ಕಂಡಿವೆ ಎಂಬುದನ್ನು ಹಕ್ಕಿಯು ಅಂದರೆ ಕಾಲವು ಹಲವು **ಸಾಮ್ರಾಟರ ನೆತ್ತಿಯನ್ನು ಕುಕ್ಕಿದೆ** ಎಂದಿದ್ದಾರೆ. ಕಾಲಚಕ್ರದಲ್ಲಿ ಯಾರೂ ಶಾಶ್ವತರಲ್ಲ ಮಣ್ಣಾಗಲೇಬೇಕು ಎಂಬುದನ್ನು ಈ ಮೂಲಕ ತಿಳಿಸಿದ್ದಾರೆ. **ಸಮಾಜದಲ್ಲಿ ನಡೆದ ಆಗು ಹೋಗುಗಳು ಹಾಗೂ ಇದರಲ್ಲಿ ಅವಶ್ಯವಿಲ್ಲದ್ದನ್ನು ತೊಲಗಿಸಿ, ಹೊಸ ಮನ್ವಂತರ ಆದ ಬಗೆ ತಿಳಿಸಿ,** ನಮ್ಮೆಲ್ಲರನ್ನೂ ಚೇತನಗೊಳಿಸಿ ಮುಂದಿನ ಪೀಳಿಗೆಗೆ ನವ ಅವಕಾಶಗಳನ್ನು ಸೃಷ್ಟಿಸಿ ಕಾಲದ ಪಕ್ಷಿಯು ಚಲಿಸುತ್ತಿದೆ ಎಂದು ಹೇಳಿದ್ದಾರೆ. ಕಾಲಚಕ್ರದಲ್ಲಿ **ಮಾನವನು ಹಲವು ವೈಜ್ಞಾನಿಕ ಆವಿಷ್ಕಾರಗಳನ್ನು ಮಾಡಿರುವುದನ್ನು** ಅಂದರೆ ಚಂದ್ರಲೋಕ ಪ್ರವೇಶ, ಮಂಗಳ ಗ್ರಹ ಪ್ರವೇಶ ಮಾಡಿರುವ ಯೋಜನೆಯನ್ನು ಪದ್ಯದಲ್ಲಿ ಸೂಚ್ಯವಾಗಿ ಹಕ್ಕಿಯ ಹಾರಾಟದ ಮೂಲಕ ತಿಳಿಸಿದ್ದಾರೆ. ಇದಲ್ಲದೆ ಬ್ರಹ್ಮಾಂಡದಲ್ಲಿ ಇನ್ನೂ ಹಲವು ಆವಿಷ್ಕಾರಗಳು ನಡೆಯುತ್ತಲೇ ಇವೆ ಎಂದು ಕವಿ ಹಕ್ಕಿಯ ಹಾರಾಟದ ಮೂಲಕ ಕಾಲ ಕಾಲಕ್ಕೆ ಆಗುತ್ತಿರುವ ಬದಲಾವಣೆಗಳನ್ನು ನಿರೂಪಿಸಿದ್ದಾರೆ.

ಅಥವಾ

**–'ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು' ಎಂಬುದನ್ನು ದ.ರಾ. ಬೇಂದ್ರೆಯವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ.**

❖ ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆ ಕಾಲ ಉರುಳಿದಂತೆ ಇತಿಹಾಸವಾಗುತ್ತಾ ಹೋಗುತ್ತವೆ. ಹಕ್ಕಿಯ ಸಹಜ ಕ್ರಿಯೆಯೊಂದಿಗೆ ಯುಗಗಳು ಉರುಳಿ ಹೊಸತನಕ್ಕೆ ತೆರೆದುಕೊಳ್ಳುತ್ತದೆ. **ಚಲನಶೀಲತೆ ಜೀವಂತಿಕೆಯ ಗುಣ ನಿಸರ್ಗದ ಹೊಂದಾಣಿಕೆಯಂತೆ ಕಾಲಚಕ್ರ ಉರುಳುತ್ತದೆ.** ಅದಕ್ಕೆ ತಡೆ ಎಂಬುದಿಲ್ಲ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ಅದಕ್ಕೆ ಹೊಂದಿಕೊಳ್ಳಲೇಬೇಕು. **ಹಲವು ಸಾಮ್ರಾಜ್ಯಗಳು ಅತ್ಯಂತ ವೈಭವವಾಗಿ ಆಳ್ವಿಕೆಯನ್ನು ನಡೆಸಿವೆ.** ಹಲವು ಸಾಮಂತ ರಾಜರುಗಳನ್ನು ಒಳಗೊಂಡು ಕೋಟೆಗಳನ್ನು ಕಟ್ಟಿಕೊಂಡು ಮೆರೆದಿವೆ. ಆದರೆ ಇದು ಶಾಶ್ವತವಾಗಿಲ್ಲ. ಇಂತಹ ಹಲವು ಸಾಮ್ರಾಜ್ಯಗಳನ್ನು ಸ್ಥಾಪಿಸಿದ **ಸಾರ್ವಭೌಮರು ಕಾಲಚಕ್ರದಲ್ಲಿ ನಶಿಸಿ ಹೋಗಿದ್ದಾರೆ.** ಇವರನ್ನೆಲ್ಲಾ ಮೀರಿ ಕಾಲ ಮುಂದುವರೆಯುತ್ತಲೇ ಇದೆ. ಹಿಂದೆ ಹಲವಾರು ಸಮಾಜ ವಿರೋಧಿ ಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಇವುಗಳನ್ನೆಲ್ಲ ಅಳಿಸಿ ಹಾಕಿ, ಮನ್ವಂತರಗಳನ್ನು ಸೃಷ್ಟಿಸಿ, ನೊಂದವರನ್ನು ಸಂತೈಸಿ, **ಚೇತನಗೊಳಿಸಿ ಮುಂದಿನ ಪೀಳಿಗೆಯವರನ್ನು ಇವುಗಳಿಂದ ರಕ್ಷಿಸಿ,** ಕಾಲವು ಹೊಸ ಬದಲಾವಣೆಗಳನ್ನು ಸೃಷ್ಟಿಸಿದೆ.

ಮಾನವನು ಇಂದು ಚಂದ್ರ, ಮಂಗಳದಂತಹ ಅನ್ಯಗ್ರಹಗಳಿಗೆ ಪಾದಾರ್ಪಣೆ ಮಾಡಿದ್ದಾನೆ. ಹಿಂದೆ ಕೇವಲ ತಾನು ವಾಸಿಸುವ ಭೌಗೋಳಿಕ ಪರಿಸರಕ್ಕೆ ಮಾತ್ರ ಮಾನವನು ಸೀಮಿತನಾಗಿದ್ದನು. ಕಾಲವು ಎಲ್ಲವನ್ನೂ ಬದಲಾವಣೆ ಮಾಡಿದೆ. ವಿಶ್ವದಲ್ಲಿ ಮಾನವ ಇನ್ನೂ ಹಲವು ವೈಜ್ಞಾನಿಕ ಆವಿಷ್ಕಾರಗಳನ್ನು ಮಾಡುತ್ತಲೇ ಇದ್ದಾನೆ. ಈ ಎಲ್ಲಾ ಸಂಗತಿಗಳಿಗೆ ನಾವು ಹೊಂದಿಕೊಳ್ಳುತ್ತಿದ್ದೇವೆ. ಮುಂದೆಯೂ ಬದಲಾವಣೆಗೆ ಹೊಂದಿಕೊಳ್ಳಲೇಬೇಕು. ಕಾಲಚಕ್ರದ ಎದುರಿನಲ್ಲಿ ನಾವು ತಲೆಬಾಗಿ ಅದರಂತೆ ನಡೆಯಲೇಬೇಕು. ಕಾಲಾಯ ತಸ್ಮೈ ನಮಃ ಎಂಬಂತೆ ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ನಡೆಯಬೇಕು. ಕಾಲಕ್ಕೆ ಯಾರೂ ಅತೀತರಲ್ಲ. ಈ ರೀತಿ ಹಲವು ನಿದರ್ಶನಗಳ ಮೂಲಕ ಕವಿ ಬೇಂದ್ರೆಯವರು ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ಎಲ್ಲರೂ ತಲೆಬಾಗಲೇಬೇಕು ಎಂಬುದನ್ನು ನಿರೂಪಿಸಿದ್ದಾರೆ.

---

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

43. **ಪ್ರಶ್ನೆಗಳು:**

**ಅ) 19ನೆಯ ಶತಮಾನದಲ್ಲಿ ಕನ್ನಡದ ಸ್ಥಿತಿ ಹೇಗಿತ್ತು?**

❖ 19ನೆಯ ಶತಮಾನದಲ್ಲಿ ಅನ್ಯಭಾಷೆಗಳು ಕನ್ನಡ ಭಾಷೆಯ ಕತ್ತನ್ನು ಹಿಸುಕುತ್ತಲಿದ್ದವು. ಓದು-ಬರೆಹ, ಮಾತು-ಕತೆಗಳಲ್ಲಿ ಕನ್ನಡವನ್ನು ಬಳಸುವುದು ಅಗೌರವವೆಂದು ಕನ್ನಡಿಗರೇ ಭಾವಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆ ಒಂದೂ ಇರಲಿಲ್ಲ. ಇದರಿಂದಾಗಿ ತನ್ನ ದೇಶದಲ್ಲಿಯೇ ಕನ್ನಡ ಭಾಷೆ ಪರದೇಶಿ ಮಗನಂತೆ ಬದುಕುತ್ತಲಿದ್ದಿತು.

---------------------------------------------------------------------------------

**ಬ) ಕನ್ನಡದ ಹುಲಿ ಎನಿಸಿದ ಚೆನ್ನಬಸಪ್ಪನವರು ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ ಸಲ್ಲಿಸಿದ ಸೇವೆಯನ್ನು ಬರೆಯಿರಿ.**

❖ ಚೆನ್ನಬಸಪ್ಪನವರು 1866ರಲ್ಲಿ ಡೆಪ್ಯೂಟಿ ಎಜ್ಯುಕೇಷನಲ್ ಇನ್‌ಸ್ಪೆಕ್ಟರ್ ಆಗಿ 1881 ರವರೆಗೆ ಆ ಹುದ್ದೆಯಲ್ಲಿಯೇ ಇದ್ದು ಕನ್ನಡಕ್ಕೆ ಸೇವೆ ಸಲ್ಲಿಸಿದರು. ಹಳ್ಳಿ, ಪಟ್ಟಣ ಸಂಚರಿಸಿ ಕನ್ನಡವನ್ನು ಶಾಲೆಯಲ್ಲಿ ಕಲಿಸಲು, ವ್ಯವಹಾರದಲ್ಲಿ ಬಳಸಲು ಸಾರ್ವಜನಿಕರಿಗೆ, ಶಿಕ್ಷಕರಿಗೆ ಪ್ರಾರ್ಥಿಸಿದರು, ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ 1855 ರಲ್ಲಿ ಬೆಳಗಾವಿ, ವಿಜಾಪುರ, ಧಾರವಾಡದಲ್ಲಿ 1, 3, 9, 12 ಇದ್ದ ಕನ್ನಡ ಶಾಲೆ ಕ್ರಮವಾಗಿ 1882 ರ ವೇಳೆಗೆ 166, 150, 241ಕ್ಕೇರಿತು ಪಂಡಿತರಿಂದ ಒಳ್ಳೆಯ ಪಠ್ಯ ಪುಸ್ತಕ ಬರೆಯಿಸಿದರು.

---

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

**42. ನಿಮ್ಮನ್ನು ಮಧುಗಿರಿ ಸರ್ಕಾರಿ ಪ್ರೌಢಶಾಲೆಯ 'ವೆಂಕಟೇಶ' ಎಂದು ಭಾವಿಸಿಕೊಂಡು, ಶಾಲೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.**

❖ **ಇವರಿಂದ** — **ಸ್ಥಳ : ಧಾರವಾಡ**

ವೆಂಕಟೇಶ — **ದಿನಾಂಕ : 21/07/2025**

ಸರ್ಕಾರಿ ಪ್ರೌಢಶಾಲೆ ಮಧುಗಿರಿ.

**ಇವರಿಗೆ,**

ಮಾನ್ಯ ಅಧ್ಯಕ್ಷರು,

ಜಿಲ್ಲಾ ಪಂಚಾಯತ್ ಮಧುಗಿರಿ–581421

**ಮಾನ್ಯರೇ,**

**ವಿಷಯ :** ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಿಕೊಡುವಂತೆ ಕೋರಿ.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ವೆಂಕಟೇಶ ಎಂಬ ನಾನು ಸರ್ಕಾರಿ ಪ್ರೌಢಶಾಲೆ ಮಧುಗಿರಿ. ಇಲ್ಲಿ 10ನೇ ತರಗತಿ ಅಭ್ಯಾಸ ಮಾಡುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಸುಮಾರು 250ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿದಿನ ಕುಡಿಯಲು, ಶೌಚಾಲಯ, ಅಕ್ಷರ ದಾಸೋಹ ಸೇರಿದಂತೆ ಸಾಕಷ್ಟು ನೀರಿನ ಅಗತ್ಯವಿದೆ. ಆದರೆ ಇತ್ತೀಚಿನ ನಿರಂತರ ಮಳೆಯಿಂದಾಗಿ ನಮ್ಮ ಶಾಲೆಗೆ ನೀರು ಸರಬರಾಜು ಮಾಡುವ ಪೈಪ್‌ಲೈನ್‌ಗಳು ಒಡೆದು ಮಲೀನವಾದ ನೀರು ಸರಬರಾಜು ಆಗುತ್ತಿದೆ. ಇದರಿಂದ ನಮ್ಮ ವಿದ್ಯಾರ್ಥಿಗಳು ಅನೇಕ ರೋಗರುಜಿನಗಳಿಗೆ ತುತಾಗುತ್ತಿದ್ದಾರೆ. ಆದ್ದರಿಂದ ದಯಾಳುಗಳಾದ ತಾವುಗಳು ನಮ್ಮ ನಗರದ ಕುಡಿಯುವ ನೀರಿನ ಸಮಸ್ಯೆಗೆ ಆದಷ್ಟು ಬೇಗ ಪರಿಹಾರ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಸಮಸ್ತ ನಗರ ನಿವಾಸಿಗಳ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

**ಧನ್ಯವಾದಗಳೊಂದಿಗೆ,**

**ಇತಿ ತಮ್ಮ ವಿಶ್ವಾಸಿ,**

*ವೆಂಕಟೇಶ*

**ಇವರಿಗೆ,**

ಮಾನ್ಯ ಅಧ್ಯಕ್ಷರು,

ಜಿಲ್ಲಾ ಪಂಚಾಯತ್ ಮಧುಗಿರಿ–581421

**ಅಥವಾ**

❖ **ನಿಮ್ಮನ್ನು ತುಮಕೂರಿನ ನಿವಾಸಿ 'ಭರತ' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವಿದ್ಯಾಭ್ಯಾಸದ ಯೋಜನೆ, ಜೀವನದ ಗುರಿ ಬಗ್ಗೆ ತಿಳಿಸಿ ಬೆಂಗಳೂರಿನಲ್ಲಿ ವಾಸವಾಗಿರುವ 'ಸತ್ಯ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.**

❖ **ಕ್ಷೇಮ,**

**ರವರಿಂದ,**

ಭರತ ಕಟ್ಟಿ

10ನೇ ತರಗತಿ

ಕೆಂಪೇಗೌಡ ಪ್ರೌಢಶಾಲೆ ತುಮಕೂರ

12/09/2025

**ಪ್ರೀತಿಯ ಗೆಳೆನಾದ ಸತ್ಯನಿಗೆ,**

ನಿನ್ನ ಗೆಳೆಯನಾದ ಭರತ ಮಾಡುವ ಶುಭಪ್ರಣಾಮಗಳು. ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀನು ಸಹ ಆರೋಗ್ಯವಾಗಿರುವಿರೆಂದು ತಿಳಿದುಕೊಂಡಿದ್ದೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ ಮಾರ್ಚ್ 2026ರಲ್ಲಿ ಜರುಗುವ ಹತ್ತನೇ ತರಗತಿ ಪರೀಕ್ಷೆಗೆ ಸಾಕಷ್ಟು ಅಭ್ಯಾಸ ಮಾಡಿ ಪರೀಕ್ಷಾ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಶಿಕ್ಷಕರು ಪಾಠ ಆಧಾರಿ ಮೌಲ್ಯಾಂಕನ ಪರೀಕ್ಷಾ ಪದ್ಧತಿ ಕುರಿತು ಮಾಹಿತಿಯನ್ನು ಒದಗಿಸುತ್ತಿದ್ದಾರೆ. ಈ ಪರೀಕ್ಷೆಯಲ್ಲಿ ಶೇ.100 ಅಂಕಗಳನ್ನು ಗಳಿಸಲು ಸಾಕಷ್ಟು

ಪೂರ್ವಸಿದ್ಧತೆಯನ್ನು ಮಾಡಿಕೊಂಡಿದ್ದೇನೆ. ಏಕೆಂದರೆ ನಾನು ಐ.ಎ.ಎಸ್ ಅಧಿಕಾರಿಯಾಗಬೇಕೆಂಬುದು ನನ್ನ ತಂದೆ, ತಾಯಿ ಹಾಗೂ ಕುಟುಂಬದ ಕನಸಾಗಿದ್ದು, ಅದನ್ನು ಈಡೇರಿಸಲೇಬೇಕೆಂಬುದು ನನ್ನ ಜೀವನದ ಅತ್ಯಂತ ದೊಡ್ಡ ಗುರಿಯಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ತಯಾರಿ ಮಾಡಿಕೊಳ್ಳುತ್ತಿದ್ದೇನೆ.

ಹಾಗೆಯೇ ನಿಮ್ಮ ತಂದೆ-ತಾಯಿಯವರಿಗೂ ನನ್ನ ಅನಂತ ನಮಸ್ಕಾರಗಳನ್ನು ತಿಳಿಸು. ಈ ಪತ್ರ ಮುಟ್ಟಿದ ಕೂಡಲೇ ನಿನ್ನ ಕ್ಷೇಮ ಸಮಾಚಾರ ಕುರಿತು ಪತ್ರವನ್ನು ಬರೆ.

**ಶುಭಪ್ರಣಾಮಗಳೊಂದಿಗೆ,**

**ಇತಿ ನಿನ್ನ ಪ್ರೀತಿಯ ಗೆಳೆಯ**

***ಭರತ***

**ಇವರಿಗೆ,**
ಸತ್ಯ
ಗಾಂಧಿನಗರ 3ನೇ ಕ್ರಾಸ್
ಬೆಂಗಳೂರು-560001


**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ. 1*5=5**

**45. ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ**

❖ **ಪೀಠಿಕೆ** :

'ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸು ಇರುತ್ತದೆ.' ಎಂಬ ನಾಣ್ಣುಡಿಯಂತೆ ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಆದ್ಯಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಇದು ನಮ್ಮ ಮನೆ ಪರಿಸರದಿಂದಲೇ, ನಮ್ಮಿಂದಲೇ ಅಂದರೆ ವಿದ್ಯಾರ್ಥಿಗಳಿಂದಲೇ ಪ್ರಾರಂಭವಾದಾಗ **'ಸ್ವಚ್ಛಭಾರತ ಅಭಿಯಾನ'**ಕ್ಕೆ ಸಂಪೂರ್ಣವಾಗಿ ಯಶಸ್ಸು ದೊರೆಯುತ್ತದೆ.

**ವಿಷಯ ನಿರೂಪಣೆ :**




**'ಆರೋಗ್ಯವೇ ಭಾಗ್ಯ'** ಎಂಬ ನಾಣ್ನುಡಿ ನಮ್ಮಲ್ಲಿದೆ ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ. ಇದಕ್ಕಾಗಿಯೇ ನಮ್ಮ ಇಂದಿನ ಪ್ರಧಾನ ಮಂತ್ರಿಗಳು ಗಾಂಧೀಜಿಯವರ ಜನ್ಮದಿನವಾದ 2.10.2014ರಂದು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು.ಗಾಂಧೀಜಿಯವರು ಹುಟ್ಟಿ 150 ವರ್ಷಪೂರ್ಣಗೊಳ್ಳುವ 2.10.2019ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ.ಈ ಅವಧಿಯಲ್ಲಿ ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು ಈ ದಿಸೆಯಲ್ಲಿ ವಿದ್ಯಾರ್ಥಿಗಳ ಪತ್ರ ಅತ್ಯಂತ ಮಹತ್ವದ್ದು.

ಶಾಲೆಯಲ್ಲಿ ಮಕ್ಕಳಿಂದ ಸ್ವಚ್ಚತೆ ಮತ್ತು ನೈರ್ಮಲ್ಯದ ಮೇಲೆ, ವಿಶೇಷವಾಗಿ ಗಾಂಧೀಜಿಯವರ ಬೋಧನೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳನ್ನು ಏರ್ಪಡಿಸಬೇಕು. ಶಾಲಾಕೊಠಡಿ, ಪ್ರಯೋಗಾಲಯಗಳು, ಗ್ರಂಥಾಲಯಗಳನ್ನು ವಿದ್ಯಾರ್ಥಿಗಳು




ಸ್ವತ: ತಾವೇ ಸ್ವಚ್ಚಗೊಳಿಸುವುದನ್ನು ರೂಢಿಮಾಡಿಕೊಳ್ಳಬೇಕು. ಶಾಲೆಯಲ್ಲಿರುವ ಕುಡಿಯುವ ನೀರಿನ ಪ್ರದೇಶ, ಶೌಚಾಲಯ, ಅಡುಗೆಮನೆಯನ್ನು ವಿದ್ಯಾರ್ಥಿಗಳು ಪ್ರತಿ ವಾರಕ್ಕೆ ಒಂದು ತರಗತಿಯಂತೆ ಸ್ವಚ್ಛಮಾಡಬೇಕು. ಶಾಲಾ ಆಟದ ಮೈದಾನಗಳು, ಶಾಲ ಉದ್ಯಾನವನಗಳು ಹಾಗೂ ಶಾಲಾ ತರಗತಿಗಳಲ್ಲಿ ಸ್ವಚ್ಛತಾ ನಿರ್ವಹಣೆಯನ್ನು ಮಾಡಬೇಕು. ವಿದ್ಯಾರ್ಥಿಗಳು ತಮ್ಮ ಗ್ರಾಮಗಳಲ್ಲಿ ಜಾಥಾಹೋಗುವ ಮೂಲಕ ಜನರಲ್ಲಿ ಸ್ವಚ್ಛಭಾರತದ ಉದ್ದೇಶವನ್ನು ಜನರಲ್ಲಿ ಮೂಡಿಸಬೇಕು. ವಿದ್ಯಾರ್ಥಿಗಳು ಶಿಕ್ಷಕರ ಸಹಾಯದಿಂದ ಶಾಲೆಗಳಲ್ಲಿ ನೈರ್ಮಲ್ಯ ಮತ್ತು ಆರೋಗ್ಯದ ಮೇಲೆ ಪ್ರಭಾವ ಬೀರುವ ಪ್ರಬಂಧ, ಚರ್ಚೆ, ಭಾಷಣ, ಚಿತ್ರಕಲೆ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಎಲ್ಲ ವಿದ್ಯಾರ್ಥಿಗಳಲಿ ಸ್ವಚ್ಛಭಾರತ ಅಭಿಯಾನದ ಕಲ್ಪನೆ ಮೂಡಿಸುವುದು. ವಿದ್ಯಾರ್ಥಿಗಳು ಸ್ವಚ್ಛತೆಯ ಮೇಲ್ವಿಚಾರಣೆಯ ಜೊತೆಗೆ ಸ್ವಚ್ಛತೆಯ ಅರಿವನ್ನು ಮೂಡಿಸುವ ಚಿತ್ರ ಪ್ರದರ್ಶನಗಳು, ವರ್ಣಚಿತ್ರಗಳು ಮತ್ತು ಸಂದೇಶಗಳನ್ನು ಸಾರುವ ಭಿತ್ತಿಪತ್ರಗಳನ್ನು ಅಚಿಟಿಸುವುದು. ವಿದ್ಯಾರ್ಥಿಗಳು ಶಾಲೆಯಲ್ಲಿನ ವಿದ್ಯಾರ್ಥಿ ಸಂಸತ್ತಿನ ಮೂಲಕ ಸಂಘಟನೆಗೊಂಡು ಶಿಕ್ಷಕರು, ಪೋಷಕರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯ ಜೊತೆಗೆ ಸ್ವಚ್ಛತೆಯ ಅರಿವನ್ನು ಮೂಡಿಸುವುದು

**ಉಪಸಂಹಾರ :**

ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ ಈ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಪ್ರತಿವಾರ ಕೇವಲ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ ಈ ಮೂಲಕ ಪ್ರಧಾನ ಮಂತ್ರಿಗಳ ಕನಸನ್ನು ನನಸಾಗಿಸುವುದರ ಮೂಲಕ ಸ್ವಚ್ಛಭಾರತ ಅಭಿಯಾನವನ್ನು ಯಶಸ್ವಿಗೊಳಿಸೋಣ.

**ಅಥವಾ**


*–ನೈಸರ್ಗಿಕ ವಿಪತ್ತು ನಿರ್ವಹಣಾ ಕಾರ್ಯದಲ್ಲಿ ತಂತ್ರಜ್ಞಾನದ ಮಹತ್ವ.*

❖ **ಪೀಠಿಕೆ :**

ವಿಪತ್ತು ಎನ್ನುವುದು ನೈಸರ್ಗಿಕ ಅಥವಾ ಮಾನವ ನಿರ್ಮಿತ ಘಟನೆಯಾಗಿದ್ದು ಅದು ಜೀವನ, ಆಸ್ತಿ, ಜೀವನೋಪಾಯ ಅಥವಾ ಉದ್ಯಮವನ್ನು ಋಣಾತ್ಮಕವಾಗಿ ಪರಿಣಾಮ ಬೀರುತ್ತದೆ. **ವಿಪತ್ತು ನಿರ್ವಹಣೆ ಎಂದರೆ ಅಪಾಯಗಳನ್ನು ನಿಭಾಯಿಸುವ ಮತ್ತು ತಪ್ಪಿಸುವ ವಿಧಾನ.** ಇದು ವಿಪತ್ತು ಸಂಭವಿಸುವ ಮೊದಲು ಅದನ್ನು ಎದುರಿಸಲು ಸಿದ್ಧತೆ ಮತ್ತು ಮಾರ್ಗಗಳು, ವಿಪತ್ತು ಪ್ರತಿಕ್ರಿಯೆ ಮತ್ತು ನೈಸರ್ಗಿಕ ಅಥವಾ ಮಾನವ ನಿರ್ಮಿತ ವಿಪತ್ತುಗಳು ಸಂಭವಿಸಿದ ನಂತರ ಸಮಾಜವನ್ನು ಬೆಂಬಲಿಸುವುದು ಮಾತ್ರವಲ್ಲದೆ ಮಾರ್ಗದರ್ಶನ ಮಾಡುವುದು ಮತ್ತು ಪುನರ್ನಿರ್ಮಿಸುವುದು ಸಹ ಒಳಗೊಂಡಿರುತ್ತದೆ.

**ವಿಷಯ ನಿರೂಪಣೆ :**

ನೈಸರ್ಗಿಕ ವಿಪತ್ತುಗಳನ್ನು ಎದುರಿಸುವಲ್ಲಿ ತಂತ್ರಜ್ಞಾನವು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಇದು **ವಿಪತ್ತುಗಳನ್ನು ಮೊದಲೇ ಪತ್ತೆಹಚ್ಚಲು,** ಹಾನಿಯನ್ನು ಕಡಿಮೆ ಮಾಡಲು, **ತುರ್ತು ಪ್ರತಿಕ್ರಿಯೆಗಳನ್ನು ಸಂಘಟಿಸಲು** ಮತ್ತು ನಂತರದ ಪುನಶ್ಚೇತನ ಕಾರ್ಯಗಳಿಗೆ ಸಹಾಯ ಮಾಡುತ್ತದೆ. **ಜಿ.ಐ.ಎಸ್ (GIS), ಡ್ರೋನ್‌ಗಳು, ಉಪಗ್ರಹ ಚಿತ್ರಣ, ಬಿಗ್ ಡೇಟಾ, ಸ್ಮಾರ್ಟ್‌ಫೋನ್‌ಗಳು ಮತ್ತು ಸಂವೇದಕಗಳಂತಹ ತಂತ್ರಜ್ಞಾನಗಳು ಮುನ್ಸೂಚನೆ, ಸಮನ್ವಯ ಮತ್ತು ಮಾಹಿತಿ ಸಂಗ್ರಹಣೆಗೆ ನೆರವಾಗುತ್ತವೆ.** ಭೂಕಂಪ, ಪ್ರವಾಹ, ಚಂಡಮಾರುತ ಮುಂತಾದ ನೈಸರ್ಗಿಕ ವಿಕೋಪಗಳನ್ನು ಮುಂಚಿತವಾಗಿ ಪತ್ತೆ ಹಚ್ಚಲು ಮತ್ತು ಅವುಗಳ ವ್ಯಾಪ್ತಿಯನ್ನು ಅಂದಾಜು ಮಾಡಲು ಇವು ಸಹಾಯ ಮಾಡುತ್ತವೆ. **ಭೂಮಿ ಮೇಲಿನ ವಿಪತ್ತುಗಳ ಪ್ರಭಾವವನ್ನು ವಿಶ್ಲೇಷಿಸಲು ಮತ್ತು ಅಪಾಯದ ಪ್ರದೇಶಗಳನ್ನು ಗುರುತಿಸಲು ಇದು ಸಹಕಾರಿಯಾಗುತ್ತದೆ**. ಹವಾಮಾನ, ಭೂಕಂಪಗಳ ಕಂಪನ ಮುಂತಾದ ಡೇಟಾವನ್ನು ನಿರಂತರವಾಗಿ ಸಂಗ್ರಹಿಸಲು ಇವುಗಳನ್ನು ಬಳಸಲಾಗುತ್ತದೆ, ಇದರಿಂದ ಪ್ರಮುಖ ಎಚ್ಚರಿಕೆಗಳನ್ನು ನೀಡಬಹುದು. ವಿಪತ್ತುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಿಸಿ, ಯಾವ ಪ್ರದೇಶಗಳಿಗೆ ಹೆಚ್ಚು ಆದ್ಯತೆ ನೀಡಬೇಕು ಮತ್ತು ಯಾವ ಜನಸಂಖ್ಯೆಯನ್ನು ಸ್ಥಳಾಂತರಿಸಬೇಕು ಎಂಬ ಮಾಹಿತಿಯನ್ನು ಒದಗಿಸುತ್ತದೆ. **ಸ್ಮಾರ್ಟ್‌ಫೋನ್‌ಗಳು ಮತ್ತು ಸಾಮಾಜಿಕ ಮಾಧ್ಯಮ: ಸಾರ್ವಜನಿಕರಿಗೆ ತಕ್ಷಣದ ಮಾಹಿತಿಯನ್ನು ಒದಗಿಸಲು, ಸಹಾಯಕ್ಕಾಗಿ ವಿನಂತಿಗಳನ್ನು ಸ್ವೀಕರಿಸಲು ಮತ್ತು ತುರ್ತು ತಂಡಗಳೊಂದಿಗೆ ಸಂವಹನ ನಡೆಸಲು ಇವು ಸಹಾಯಕವಾಗಿವೆ**. ಸಂಖ್ಯಾಶಾಸ್ತ್ರ ಮತ್ತು ಅನಾಲಿಟಿಕ್ಸ್ ನಡುವೆ ಜೋಡಣೆ ಮೂಲಕ, ತಂತ್ರಜ್ಞಾನವು ರಾಜ್ಯ ಮತ್ತು ಸ್ಥಳೀಯ ಆಡಳಿತಗಳಿಗೆ ಪರಿಣಾಮಕಾರಿ ತಂತ್ರಗಳ ರೂಪಿಸಬಲ್ಲದು.




## ಉಪಸಂಹಾರ :

ಒಟ್ಟಾರೆಯಾಗಿ, ನೈಸರ್ಗಿಕ ವಿಪತ್ತು ನಿರ್ವಹಣೆಯಲ್ಲಿ ತಂತ್ರಜ್ಞಾನದ ಬಳಕೆಯು ಜೀವಗಳನ್ನು ಉಳಿಸಲು, ಆಸ್ತಿ ನಷ್ಟವನ್ನು ಕಡಿಮೆ ಮಾಡಲು ಮತ್ತು ಭವಿಷ್ಯದ ವಿಪತ್ತುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಎದುರಿಸಲು ಸಹಾಯ ಮಾಡುತ್ತದೆ. ಪೀಡಿತ ಪ್ರದೇಶಗಳಲ್ಲಿ ವೇಗವಾಗಿ ಕೆಲಸ ಮಾಡಲು ಮತ್ತು ಗರಿಷ್ಠ ಜನರನ್ನು ತಲುಪಲು ಸರ್ಕಾರಕ್ಕೆ ವಿಪತ್ತು ನಿರ್ವಹಣೆ ಒಂದು ಪ್ರಮುಖ ಸಾಧನವಾಗಿದೆ. ವಿಪತ್ತು ನಿರ್ವಹಣಾ ಚಕ್ರವು ಭವಿಷ್ಯದ ಯಾವುದೇ ವಿಪತ್ತಿಗೆ ತಡೆಗಟ್ಟುವಿಕೆ ಮತ್ತು ಸಿದ್ಧತೆಯ ಮೂಲಕ ವಿಪತ್ತುಗಳನ್ನು ವೇಗವಾಗಿ ತಗ್ಗಿಸಲು ಸಹಾಯ ಮಾಡುತ್ತದೆ. ತಂತ್ರಜ್ಞಾನವು ಸರ್ಕಾರಗಳು ಮೊದಲು ಸಾಧ್ಯವಾಗದ ಕ್ರಮಗಳನ್ನು ನೋಡಲು ಅನುವು ಮಾಡಿಕೊಟ್ಟಿದೆ.